# ಒಡೆದ ಗಡಿಗೆಯ ಬೆಲೆ

■ ಲಲಿತಾ ಕೆ. ಹೊಸಪ್ಯಾಟಿ
ಕಲೆ: ಸಂತೋಷ್ ಸಸಿಹಿತ್ಲು

ಹಿರೇವಾಡಗಿ ಎಂಬ ಊರಲ್ಲಿ ವಿಶಾಲ ಮತ್ತು ವಿಭವ ಎಂಬ ಪುಟ್ಟ ಬಾಲಕರಿದ್ದರು. ಅವರ ಅಪ್ಪ ಪ್ರಶಾಂತನು ಮಣ್ಣಿನ ಮಡಿಕೆಗಳನ್ನು ಮಾಡುವಲ್ಲಿ ಹೆಸರು ಮಾಡಿದ್ದ. ಹೊಸ ತರಹದ ಗಡಿಗೆ, ಹೂಜಿ, ದೀಪಸ್ಥಂಭ, ಅಡುಗೆ ಬೋಗುಣಿ, ಗಡಿಗೆ, ತಾಟು, ಲೋಟ ಮತ್ತೆ ತಂಬಿಗೆ, ಚಾ ಕುಡಿವ



ಕಪ್ಪು ಎಲ್ಲವನ್ನೂ ಮಾಡಿ ಸುತ್ತೆಲ್ಲಾ ನೂರಾರು ಹಳ್ಳಿಗಳಲ್ಲಿ ಪ್ರಸಿದ್ಧಿಯಾಗಿದ್ದ. ಆದರೆ ಮಕ್ಕಳನ್ನು ಪದೇ ಪದೇ ಶಾಲೆ ಬಿಡಿಸಿ ತನ್ನೊಂದಿಗೆ ಪರ ಊರ ಸಂತೆಗೆ ಕರೆದುಕೊಂಡು ಹೋಗುತ್ತಿದ್ದನು.

ಅದೇ ಊರಿನ ಕನ್ನಡ ಶಾಲೆಯಲ್ಲಿ ಬಹು ವರ್ಷಗಳಿಂದ ಮಲ್ಲಪ್ಪ ಎಂಬ ಶಿಕ್ಷಕರು ಕೆಲಸ ಮಾಡುತ್ತಿದ್ದರು. ಅವರು ತಮಗೆ ಬರುವ ಸಂಬಳದಲ್ಲಿ ಅರ್ಧದಷ್ಟು ಹಣವನ್ನು ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ಖರ್ಚು ಮಾಡುತ್ತಿದ್ದರು. ವಿಭವ, ವಿಶಾಲ ಇಬ್ಬರೂ ಜಾಣ ವಿದ್ಯಾರ್ಥಿಗಳಾಗಿದ್ದರು. ಶಾಲೆ ಬಿಡಿಸಬೇಡ ಅವರು ವಿದ್ಯಾಭ್ಯಾಸ ಮಾಡಲಿ ಎಂದು ಮನೆಗೆ ಬಂದು ಮಲ್ಲಪ್ಪ ಶಿಕ್ಷಕರು ಹೇಳಿ ಹೋಗಿದ್ದರೂ ಪ್ರಯೋಜನವಾಗಿರಲಿಲ್ಲ. ಆದಿನ ಪಟ್ಟು ಹಿಡಿದು ಮನೆಯಲ್ಲಿ ಕುಳಿತು ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿದ್ದರು ಮತ್ತು ವಿದ್ಯಾಭ್ಯಾಸ ಪೂರ್ಣವಾಗುವವರೆಗೂ ಕಾಳಜಿ ವಹಿಸಿದ್ದರು.

ಅವರಪ್ಪ ಮಾಡುವ ಕೆಲಸದಲ್ಲಿಯೇ ಆಸಕ್ತಿಯಿದ್ದುದರಿಂದ ಪಾತ್ರೆಗಳನ್ನು ತಯಾರಿಸುವ ಕೆಲಸದಲ್ಲಿಯೇ ಮುಂದುವರೆದರು. ತಂದೆ ಇಬ್ಬರಿಗೂ ಉದ್ಯೋಗಕ್ಕೆಂದು ಒಂದೊಂದು ಅಂಗಡಿ ಹಾಕಿಕೊಟ್ಟನು. ಕೆಲವು ವರ್ಷಗಳು ಕಳೆದ ಮೇಲೆ ಮಲ್ಲಪ್ಪ ಶಿಕ್ಷಕರಿಗೆ ವಿಭನ ಮತ್ತು ವಿಶಾಲನನ್ನು ನೋಡುವಾಸೆಯಾಯಿತು. ಹಿರೇವಾಡಗಿಗೆ ಬಂದರು. ಇಬ್ಬರೂ ವ್ಯಾಪಾರ ಮಾಡುತ್ತಿದ್ದರು. ಮೊದಲು ವಿಭವನ ಹತ್ತಿರ ಬಂದ ಗುರುಗಳು ಅವನನ್ನು ಮಾತನಾಡಿಸಿದರು. ತಾವ್ಯಾರು ಅಂತ ನನಗೆ

---

# ಕೋತಿ ಮದುವೆ

■ ವೀಣಾ ಅಶೋಕ ಜೋಶಿ
ಕಲೆ: ಸಂತೋಷ್ ಸಸಿಹಿತ್ಲು



ತಾನೂ ಕೋತಿಯು
ನೀಲೂ ಕಪಿಯು
ಮದುವೆಯಾಗಲು ಬಯಸಿದವು

ಇಬ್ಬರು ಹೋಗಿ
ನಾಚಿಕೆ ಬಿಟ್ಟು
ಹಿರಿಯರ ಬಳಿಯಲಿ ಹೇಳಿದವು

ಎಲ್ಲರೂ ಒಪ್ಪಲು
ಗಂಡು ಹೆಣ್ಣು
ಖುಷಿಯಲಿ ಕುಣಿಕುಣಿದಾಡಿದವು

ಹುಣ್ಣಿಮೆ ಮರುದಿನ
ಬಿದಿರು ಮೆಳೆಯಲಿ
ಮದುವೆ ಮಂಟಪ ಕಟ್ಟಿದವು

ನೀಲೂ ಕೈಗೆ
ಮೆಹೆಂದಿ ಹಚ್ಚಿ
ಅರಿಶಿಣ ಶಾಸ್ತ್ರ ಮಾಡಿದರು

ಕಾಡಲಿ ಅಲೆದು
ಮರಗಳನೇರಿ
ತರ ತರ ಹಣ್ಣು ಹುಡುಕಿದವು

ಮದುವೆಯ ದಿನದಲಿ
ಬಂಧು ಮಿತ್ರರಿಗೆ
ಹಂಚಲು ತಯಾರಿ ನಡೆಸಿದವು

ತಾನೂ ಕೋತಿ
ನೀಲೂ ಕಪಿಗೆ
ಚಂದದ ತಾಳಿಯ ಕಟ್ಟಿರಲು

ಪೊಂ ಪೊಂ ಪೊಂ
ಪೀ ಪೀ ಪೀ
ಮಂಗಳ ವಾದ್ಯ ಮೊಳಗಿದವು

ಮದುವೆಗೆ ಮೊದಲೆ
ಮಂಗಗಳೆಲ್ಲ
ಊಟಕೆ ಬಂದು ಕುಳಿತಿಹವು

ಹಣ್ಣಿನ ಗೂಡೆಯ
ಹುಡುಕಲು ಅಲ್ಲಿ
ಕೇವಲ ಸಿಪ್ಪೆಯೇ ಕಂಡಿಹವು

ಮದುವೆಗೆ ಬಂದ
ನೆಂಟರು ಇಷ್ಟರು
ಮಿಕಿ ಮಿಕಿ ಮುಖ ಮುಖ ನೋಡಿಹವು

ಮದುವೆಯ ಬಿಟ್ಟು
ಹಣ್ಣನು ಹುಡುಕಲು
ಕೂಡಲೆ ಮರವನು ಏರಿದವು ■